**||ಶ್ರೀ ಲಕ್ಷ್ಮೀನರಸಿಂಹ ಪ್ರಸೀದ ||**

**ಶ್ರೀಮತ್ಕವಿಕುಲತಿಲಕ ಶ್ರೀಮನ್ನೃಸಿಂಹ ಭಾಗವತಸುತ**

**ಶ್ರೀಮಜ್ಜಗನ್ನಾಥದಾಸರಾಯಕೃತ**

# ಶ್ರೀ ಮದ್ಧರಿಕಥಾಮೃತಸಾರ

ಜಲಜೇಷ್ಟನಿಭಾಕಾರಂ ಜಗದೀಶಪದಾಶ್ರಯಂ

ಜಗತೀತಲವಿಖ್ಯಾತಂ ಜಗನ್ನಾಥಗುರುಂ ಭಜೇ ||

ದಾಸವರ್ಯಂ ದಯಾಯುಕ್ತಂ ದೂರೀಕೃತ ದುರಾಷಿಶಂ |

ಹರಿಕಥಾಮೃತ ವಕ್ತಾರಂ ಜಗನ್ನಾಥ ಗುರುಂ ಭಜೇ ||

ಶ್ರೀ ಗುರುಭ್ಯೋ ನಮಃ

## ೧ . ಮಂಗಳಾಚರಣ ಸಂಧಿ

(ಪಲ್ಲವಿ ಶ್ಲೋಕವನ್ನು ಪ್ರತಿ ಸಂಧಿಯ ಮೊದಲಲ್ಲೂ ಹೇಳಿಕೊಳ್ಳಬೇಕು )

ಹರಿಕಥಾಮೃತಸಾರ ಗುರುಗಳ |

ಕರುಣದಿಂದಾಪನಿತು ಪೇಳುವೆ |

ಪರಮ ಭಗವದ್ಭಕ್ತರಿದನಾದರದಿ ಕೇಳುವುದು || ಪ ||

ಶ್ರೀರಮಣಿಕರಕಮಲಪೂಜಿತ ।
ಚಾರುಚರಣಸರೋಜ ಬ್ರಹ್ಮಸ ।
ಮೀರವಾಣಿಫಣೀಂದ್ರವೀಂದ್ರಭವೇಂದ್ರಮುಖವಿನುತ ॥
ನೀರಜಭವಾಂಡೊದಯಸ್ಥಿತಿ ।
ಕಾರಣನೆ ಕೈವಲ್ಯದಾಯಕ ।
ನಾರಸಿಂಹನೆ ನಮಿಪೆ ಕರುಣಿಪುದೆಮಗೆ ಮಂಗಳವ ॥ ೧ ॥

ಜಗದುದರನತಿವಿಮಲಗುಣರೂ ।
ಪಗಳನಾಲೋಚನದಿ ಭಾರತ ।
ನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ ॥
ಬಗೆಬಗೆಯ ನೂತನವ ಕಾಣುತ ।
ಮಿಗೆ ಹರುಷದಿಂ ಪೊಗಳಿ ಹಿಗ್ಗುವ ।
ತ್ರಿಗುಣಮಾನಿ ಮಹಾಲಕುಮಿ ಸಂತೈಸಲನುದಿನವು ॥ ೨ ॥

ನಿರುಪಮಾನಂದಾತ್ಮಭವ ನಿ ।
ರ್ಜರಸಭಾಸಂಸೇವ್ಯ ಋಜುಗಣ ।
ದರಸೇ ಸತ್ವ ಪ್ರಚುರ ವಾಣೀಮುಖಸರೋಜೇನ ॥

ಗರುಡಶೇಷಶಶಾಂಕದಳಶೇ |
ಖರರ ಜನಕ ಜಗದ್ಗುರುವೆ ತ್ವ |
ಚರಣಗಳಿಗಭಿವಂದಿಪೆ ಪಾಲಿಪುದು ಸನ್ಮತಿಯ ||೩||

ಆರು ಮೂರೆರಡೊಂದು ಸಾವಿರ |
ಮೂರೆರಡು ಶತಶ್ವಾಸ ಜಪಗಳ |
ಮೂರು ವಿಧ ಜೀವರೊಳಗಬ್ಜಜಕಲ್ಪ ಪರಿಯಂತ ||
ತಾ ರಚಿಸಿ ಸಾತ್ವರಿಗೆ ಸುಖ ಸಂ |
ಸಾರ ಮಿಶ್ರರಿಗಧಮಜನರಿಗ |
ಪಾರ ದುಃಖಿಗಳೀವ ಗುರುಪವಮಾನ ಸಲಹೆಮ್ಮ ||೪||

ಚತುರವದನನ ರಾಣಿ ಅತಿರೋ |
ಹಿತ ವಿಮಲ ವಿಜ್ಞಾನಿ ನಿಗಮ |
ಪ್ರತತಿಗಳಿಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ ||
ನತಿಸಿ ಬೇಡುವೆ ಜನನಿ ಲಕುಮೀ |
ಪತಿಯ ಗುಣಗಳ ತುತಿಪುದಕೆ ಸ |
ನ್ಮತಿಯ ಪಾಲಿಸಿ ನೆಲೆಸು ನೀ ಮದ್ವದನಸದನದಲಿ ||೫||